**ಸಾಕ್ಷಿಗೆ ದಿನಾಂಕ 02.12.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 1 ನೇ ಎದುರುದಾರರ ಪರ ಶ್ರೀ.ಎ ಎನ್ ಹೆಚ್ ವಕೀಲರಿಂದಃ**

1. ನನ್ನ ವಾಹನಕ್ಕೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ತೆಗೆದುಕೊಂಡು ಬಂದಿದ್ದು, ಅದನ್ನು ಈಗ ಹಾಜರುಪಡಿಸುತ್ತಿದ್ದೇನೆ. ಸದರಿ ದಾಖಲೆಯನ್ನು **ನಿಪಿ.*11*** ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ ಪ್ರಕಾರ ಎರಡನೇ ಎದುರುದಾರರ ವಾಹನ ನನ್ನ ವಾಹನದ ಹಿಂದಿನಿಂದ ಬಂದು ಡಿಕ್ಕಿಪಡಿಸಿರುತ್ತದೆ. ತದನಂತರ ಪೊಲೀಸರು ಎರಡು ವಾಹನಗಳನ್ನು ಅಮಾನತುಪಡಿಸಿಕೊಂಡಿದ್ದು, ಠಾಣೆಯಲ್ಲಿ ವಾಹನ ಪರಿಶೀಲನೆ ಮಾಡಿ ಐಎಂವಿ ವರದಿ ನೀಡಿರುತ್ತಾರೆ ಎಂದರೆ ಸರಿ. ನಿಪಿ.5 ರ ಪ್ರಕಾರ ನನ್ನ ವಾಹನಕ್ಕೆ ಮುಂದಿನ ಹೆಡ್ ಲೈಟ್ ಗಳು, ಮುಂಭಾಗದ ಬಾನೇಟ್, ರೇಡಿಯಟರ್ ಜಖಂಗಳು ಆಗಿವೆ ಎಂದು ನಮೂದಾಗಿದೆ ಎಂದರೆ ಸರಿ.

2. ಅಪಘಾತದ ನಂತರ ನನ್ನ ವಾಹನವನ್ನು ಯಶವಂತಪುರದ ಮಾರುರತಿ ಶೋರೂಂಗೆ ರಿಪೇರಿಗೆ ಬಿಟ್ಟಿರುತ್ತೇನೆ. ಸರ್ವೇಯರನ್ನಾಗಿ ಶೋರೂಂನವರು ಶ್ರೀಕಾಂತ್ ಎನ್ನುವವರನ್ನು ನೇಮಕ ಮಾಡಿರುತ್ತಾರೆ. ಶೋರೂಂನವರು ನನ್ನ ವಾಹನಕ್ಕೆ ಆದ ಜಖಂಗಳ ಬಗ್ಗೆ ನೀಡಿದ ವರದಿಯನ್ನು ಹಾಜರುಪಡಿಸಬಲ್ಲೇನು. ಸರ್ವೇಯರ್ ವರದಿಯ ಪ್ರಕಾರ ನನಗೆ ರೂ.1,55,000/- ಬರಬೇಕು. ನನ್ನ ವಾಹನ 2011 ಆಗಿದ್ದು, ಸದರಿ ವಾಹನದ ಬಿಡಿಭಾಗಗಳ ಸವಕಳಿಯಾಗಿದ್ದು, ಅವುಗಳನ್ನೂ ಸಹ ಇದೇ ಸಮಯದಲ್ಲಿ ರಿಪೇರಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರ್ ಎನ್ ಎಸ್ ಮೋಟಾರ್ಸ್ ರವರ ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ. ನಿಪಿ.10 ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ.

3. ಐಎಂವಿ ವರದಿಯ ಪ್ರಕಾರ ನನ್ನ ವಾಹನದ ಮುಂಭಾಗ ಮಾತ್ರ ಜಖಂಗೊಂಡಿದ್ದು, ನನ್ನ ಹೇಳಿದಂತೆ ಎರಡನೇ ಎದುರುದಾರರ ವಾಹನ ನನಗೆ ಡಿಕ್ಕಿಪಡಿಸಿದ್ದರೆ ನನ್ನ ವಾಹನದ ಹಿಂಭಾಗ ಜಖಂಗೊಳ್ಳಬೇಕಾಗಿತ್ತು ಎಂದರೆ ನನ್ನ ವಾಹನದ ಹಿಂಭಾಗ ಗಾಜು ಜಖಂಗೊಂಡಿರುತ್ತದೆ, ಸಾಕ್ಷಿ ಮುಂದುವರೆದು ಅಪಘಾತದ ಪರಿಣಾಮವಾಗಿ ನನ್ನ ವಾಹನದ ಮುಂದೆ ಹೋಗುತ್ತಿದ್ದ ವಾಹನದ ಹಿಂಭಾಗಕ್ಕೆ ತಾಗಿರುತ್ತದೆ. ನನ್ನ ವಾಹನದ ಹಿಂಭಾಗದ ಜಖಂಗಳ ಬಗ್ಗೆ ತೋರಿಸಲು ದಾಖಲೆ ಹಾಜರುಪಡಿಸಬಲ್ಲೇನು. ನನ್ನ ವಾಹನದ ಜಖಂಗಳಿಗೂ ಮತ್ತು ಎರಡನೇ ಎದುರುದಾರರ ವಾಹನಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಎರಡನೇ ಎದುರುದಾರರ ವಾಹನದ ವಿರುದ್ಧ ಸುಳ್ಳು ದೂರು ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಎರಡನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**